# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

Spl.C.26/2020

C.W.2
P.W. 2

ದಿನಾಂಕಃ 30-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಹೆಸರು | ಃ ಸಾವಿತ್ರಮ್ಮ |
| ಗಂಡನ ಹೆಸರು | ಃ ರಾಮಯ್ಯ |
| ವಯಸ್ಸು | ಃ 30 ವರ್ಷ |
| ಉದ್ಯೋಗ | ಃ ವ್ಯವಸಾಯ |
| ವಾಸ | ಃ ಸಿಂಗದಹಳ್ಳಿ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನನಗೆ ಚಾಸಾ-1 ಗೊತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು. ಆರೋಪಿತರು ನಮ್ಮ ಊರಿನ ಪಕ್ಕದ ಹಳ್ಳಿಯವರು. ನಾನು ಮತ್ತು ಚಾಸಾ-1 ರವರು ಪರಿಶಿಷ್ಟ ಜಾತಿಯ ಮಾದಿಗ ಜನಾಂಗಕ್ಕೆ ಸೇರಿದವರು. ಆರೋಪಿತರು 1 ರಿಂದ 3 ರವರು ವಕ್ಕಲಿಗ ಜನಾಂಗಕ್ಕೆ ಸೇರಿದವರು. ಆರೋಪಿ-4 ರವರು ಮಡಿವಾಳ ಜನಾಂಗಕ್ಕೆ ಸೇರಿದವರು.

2) ಚಾಸಾ-1 ನನ್ನ ಮಾವನ ಮಗಳು. ಅಂದಾಜು 3 ವರ್ಷಗಳ ಹಿಂದೆ ಮಧ್ಯಾಹ್ನ 3 ಗಂಟೆ ಸುಮಾರಿಗೆ ನಾನು ನನ್ನ ಜಮೀನಿನಲ್ಲಿ ಕೆಲಸ ಮಾಡುತ್ತಿರುವಾಗ

ಪಕ್ಕದ ಜಮೀನಿನಲ್ಲಿ ಚಾಸಾ-1 ರವರು ಕೆಲಸ ಮಾಡುತ್ತಿದ್ದು ಚಾಸಾ-1 ಮತ್ತು ಆರೋಪಿ ಗಂಗಣ್ಣರವರ ಮಧ್ಯೆ ಕಿರುಚಾಡುವ ಶಬ್ದ ಕೇಳಿ ನಾನು ಅಲ್ಲಿಗೆ ಹೋದೆ. ಆಗ ಆರೋಪಿ ಜಯಣ್ಣ ರವರು ಚಾಸಾ-1 ರವರೊಂದಿಗೆ ಗಲಾಟೆ ತೆಗೆದು ಮಾದಿಗ ಸೂಳೆ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ಆಗ ನಾನು ಜಗಳವನ್ನು ಬಿಡಿಸಲು ಹೋದೆ, ಆಗ ಆರೋಪಿ ಜಯಣ್ಣ ನನ್ನ ಜೊತೆಗೆ ಜಗಳ ತೆಗೆದು ಚಪ್ಪಲಿ ಕಾಲಿನಿಂದ ಒದ್ದನು. ಆಗ ಆರೋಪಿ ಅಂಜಿನಪ್ಪ ಮಾದಿಗ ಸೂಳೆ ಮುಂಡೆಯನ್ನು ಬಿಡಬಾರದು ಎಂದು ದೊಣ್ಣೆ ತೆಗೆದುಕೊಂಡು ಬಂದು ದೊಣ್ಣೆಯಿಂದ ನನ್ನ ಸೊಂಟಕ್ಕೆ ಹೊಡೆದಿರುತ್ತಾರೆ. ಆಗ ನನ್ನ ಸೊಂಟದಲ್ಲಿ ನೋವು ಉಂಟಾಗಿರುತ್ತದೆ . ಆಗ ಪಕ್ಕದ ರಸ್ತೆಯ ಮೇಲೆ ಹೋಗುತ್ತಿದ್ದ ಚಾಸಾ-4 , 5 ರವರು ನಾವು ಕಿರುಚಾಡುವ ಶಬ್ದ ಕೇಳಿ ಅಲ್ಲಿಗೆ ಬಂದು ನಮ್ಮನ್ನು ಮನೆಗೆ ಕರೆದುಕೊಂಡು ಹೋದರು. ನಂತರ ಅಂಬ್ಯೂಲೆನ್ಸ್ ವಾಹನದಲ್ಲಿ ಚಿಕ್ಕನಾಯಕನಹಳ್ಳಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋದೆವು. ಆಸ್ಪತ್ರೆಗೆ ನಾನು ಮತ್ತು ಚಾಸಾ-1 ರವರು ಹೋಗಿರುತ್ತೇವೆ . ನ್ಯಾಯಾಲಯದ ಮುಂದೆ ಇರುವ ದೊಣ್ಣೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ-1 ಎಂದು ಗುರುತಿಸಲಾಗಿದೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚಿಕ್ಕನಾಯಕನ ಹಳ್ಳಿ ಪೊಲೀಸ್ ಠಾಣೆಗೆ ಹೋಗಿಚಾಸಾ-1 ರವರ ಜೊತೆ ದೂರನ್ನು ನೀಡಿರುತ್ತೇನೆ. ನಿಪಿ-1 ರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು , ಸಾಕ್ಷಿಯ

ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-5 ಪೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಭಾವಚಿತ್ರ ವಿರುತ್ತದೆ ಎಂದು ಹೇಳಿರುತ್ತಾರೆ. ಸದರಿ ಪೋಟೋವನ್ನು ಡಿ ವೈ ಎಸ್ ಪಿ ರವರು ಸ್ಥಳಕ್ಕೆ ಬಂದಾಗ ತೆಗೆದ ಪೋಟೋವಾಗಿರುತ್ತದೆ. ಘಟನೆಯ ಕುರಿತುಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿಯ ಪರ ಶ್ರೀ ಎನ್ ಬಿ ವಕೀಲರಿಂದಃ</u>

ಆರೋಪಿ ಪರ ವಕೀಲರ ವಿನಂತಿಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

**3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
ತುಮಕೂರು